12) ಕೊಳವೆ ಬಾವಿ

13) ಬೀದಿ ದೀಪ

ಉಪ ಮಾರುಕಟ್ಟೆ ಪ್ರಾಂಗಣ ಮಳಖೇಡ

1) ಕಛೇರಿ ಕಟ್ಟಡ

2) ಚಹಾದ ಅಂಗಡಿ

3) ವಿಶ್ರಾಂತಿ ಗೃಹ

4) ಜಾನುವಾರು ಕೊಟ್ಟಿಗೆ

5) ನೀರಿನ ತೊಟ್ಟಿ

6) ಚೆಕ್ ಪೋಸ್ಟ್

7) ಸುತ್ತುಗೋಡೆ

8) ಶೌಚಾಲಯ

9) ಡಬ್ಲ್ಯೂಬಿಎಂ ರಸ್ತೆ

10) ಬೀದಿ ದೀಪ

ಗ್ರಾಮೀಣ ಸಂಪರ್ಕ ರಸ್ತೆ

1) ಬೆಟಗೇರಿ 'ಬಿ' ಯಿಂದ ರಾಜ್ಯ ಹೆದ್ದಾರಿವರೆಗೆ ಡಾಂಬರೀಕರಣ

2) ಬೆನಕನ ಹಳ್ಳಿಯಿಂದ ಜಂಕ್ಷನ್‌ರಸ್ತೆಯವರೆಗೆ ಖರೀದಿಕರಣ

3) ಬೆನಕನಹಳ್ಳಿಯಿಂದ ರಾಜ್ಯ ಹೆದ್ದಾರಿಯವರೆಗೆ ಡಾಂಬರೀಕರಣ

ಗುಲ್ಬರ್ಗಾ ಜಿಲ್ಲೆ ಸೇಡಂ ಕ್ಷೇತ್ರದಲ್ಲಿ ಬಸ್ಸುಗಳ ಸಂಚಾರ ಅವ್ಯವಸ್ಥೆ

466 - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಮೇಲೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ಸಂಚಾರ ಅವ್ಯವಸ್ಥೆಯಾಗಿ ಕೆಲವು ರಸ್ತೆಗಳ ಸಂಚಾರ ಸ್ಥಗಿತಗೊಂಡು ಆ ಭಾಗದ ನಾಗರಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಗುಲ್ಬರ್ಗಾ ಡಿಪೋ, ಯಾದಗಿರಿ ಡಿಪೋ ಬಸ್ಸುಗಳು, ಸೇಡಂ ಕೋಡ್ಲಾ ಮಾರ್ಗವಾಗಿ ಯಾದಗಿರಿಗೆ ಹೋಗುವ ಬಸ್ಸುಗಳ ಸಂಖ್ಯೆ ಎಷ್ಟು?

ಇ) ಈ ಎರಡು-ಮೂರು ತಿಂಗಳಿಂದ ಈ ಬಸ್ಸುಗಳ ಸಂಚಾರ ಸ್ಥಗಿತಗೊಂಡು ಒಂದೆರಡು ಬಸ್ಸುಗಳು ಮಾತ್ರ ಸಂಚರಿಸುತ್ತಿರುವುದು ನಿಜವೇ?

ಈ) ಈ ಪ್ರಕಾರ ಅವ್ಯವಸ್ಥೆ ಮಾಡಿ ಬಸ್ಸುಗಳನ್ನು ಸ್ಥಗಿತಗೊಳಿಸಿ ನಾಗರೀಕರಿಗೆ ಅನಾನುಕೂಲ ಮಾಡಿರುವ ಅಧಿಕಾರಿಗಳ ಮೇಲೆ ಕೈಗೊಳ್ಳುವ ಕ್ರಮವೇನು?

ಉ) ಈಗಲಾದರೂ ಗುಲ್ಬರ್ಗ ಡಿಪೋ ಮತ್ತು ಯಾದಗಿರಿ ಡಿಪೋ ಬಸ್ಸುಗಳು ಸಮಯಕ್ಕೆ ಸರಿಯಾಗಿ ಎಲ್ಲಾ ಮಾರ್ಗಗಳ ಮೇಲೆ ನಡೆಸುವ ವ್ಯವಸ್ಥೆ ಮಾಡಲಾಗುವುಲೇ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಹೌದು.

ಆ) ಸೇಡಂದಿಂದ ಯಾದಗಿರಿಗೆ (ಕೋಡ್ಲ್ ಮಾರ್ಗ) - 3 ಬಸ್ಸುಗಳು. ಸೇಡಂದಿಂದ ಸೇಡಂ (ಕೋಡ್ಲಾ ಮಾರ್ಗ) - 2 ಬಸ್ಸುಗಳು.

ಇ) ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿ ನಡೆದ ಜಾತ್ರೆಗಳಿಗಾಗಿ ಹಾಗೂ ಗ್ರಾಮ ಪಂಚಾಯತಿ ಚುನಾವಣೆಗೆ ಬಸ್ಸುಗಳನ್ನು ಒದಗಿಸಬೇಕಾದುದ್ದರಿಂದ ಸೇಡಂ ತಾಲ್ಲೂಕಿನ ಕೆಲವು ಸೇವೆಗಳನ್ನು ಕ್ರಮಬದ್ಧವಾಗಿ ಆಚರಣೆ ಮಾಡಲಿಲ್ಲ. ಈಗ ಸದರೀ ಸೇವೆಯನ್ನು ಆಚರಣೆ ಮಾಡಲಾಗುತ್ತಿದೆ.

ಈ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಉ) ಹೌದು.

ರೈತರು ತಂಬಾಕಿಗೆ ಬೆಳದ ಲಾಭದ ಬೆಲೆ ಬಾರದೆ ಕಂಗಾಲಾಗಿರುವ ಬಗ್ಗೆ.

468 - ಶ್ರೀ ವಸವರಾಜು. ಹೆಚ್.ಸಿ. (ಪಿರಿಯಾಪಟ್ಟಣ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಸಾವಿರಾರು ರೈತರು ಅದರಲ್ಲೂ ಪಿರಿಯಾಪಟ್ಟಣ ತಂಬಾಕು ಮಂಡಳಿ ವ್ಯಾಪ್ತಿಯಲ್ಲಿ ಬರುವ ರೈತರು, ವಿ.ಎಫ್.ಸಿ. ತಂಬಾಕು ಬೆಳೆ ಬೆಳೆದು ಲಾಭದ ಬೆಲೆ ಬಾರದೇ ಕಂಗಾಲಾಗಿದ್ದಾರೆ. ಈ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) :

ಅ) ಮಾರುಕಟ್ಟೆಯಲ್ಲಿ ತಂಬಾಕು ಬೆಲೆಯು ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆಯಾಗಿರುವುದಿಲ್ಲ. 1999ನೇ ಸಾಲಿಗೆ 40 ಮಿಲಿಯನ್ ಕೆ.ಜಿ. ಗಳಷ್ಟು ವಿ.ಎಫ್.ಸಿ. ತಂಬಾಕನ್ನು ಬೆಳೆಯಲು ತಂಬಾಕು ಮಂಡಳಿ ನಿಗಧಿಪಡಿಸಿತ್ತು. ಅನಧಿಕೃತ ಬೆಳೆಗಾರರು ಯಾವುದೇ ಕಾರಣಕ್ಕೂ ವಿ.ಎಫ್.ಸಿ. ತಂಬಾಕನ್ನು ಬೆಳೆಯಬಾರದೆಂದು ಮುನ್ನೆಚ್ಚರಿಕೆ ನೀಡಲಾಗಿದ್ದರೂ ಸಹ, ಇದನ್ನು ಉಲ್ಲಂಘಿಸಿ 51 ಮಿಲಿಯನ್ ಕೆ.ಜಿ.ಗಳಷ್ಟು ವಿ.ಎಫ್.ಸಿ. ತಂಬಾಕನ್ನು ರೈತರು ಉತ್ಪಾದಿಸುತ್ತಾರೆ.